ಶ್ರೀ ಡಿ.ವಿ. ಸದಾನಂದಗೌಡ:- ಇದು ಒಬ್ಬ ಶಾಸಕನ ಪ್ರಶ್ನೆಯಾದ ಕಾರಣ ನಾನು ಇಷ್ಟೇ ವಿನಂತಿ ಮಾಡುವುದು. ನಾನು ಇದನ್ನು ರಾಜಕೀಯವಾಗಿ, ಅವರ ಮೇಲೆ ಅಕ್ಷನ್ ತೆಗೆದುಕೊಳ್ಳಿ ಎಂದು ಬಳಸುತ್ತಾ ಇಲ್ಲ. ಒಬ್ಬ ಶಾಸಕನಾಗಿ, ನಾನೂ ಕೂಡ ಭ್ರಷ್ಟಾಚಾರದಲ್ಲಿ ಮೌನವಹಿಸಿದ ಕಾರಣ, ಪರೋಕ್ಷವಾಗಿ ಭ್ರಷ್ಟಾಚಾರಕ್ಕೆ ಬೆಂಬಲ ಕೊಟ್ಟಿದ್ದಾರೆಂದು ಹೇಳತಕ್ಕ ಸಂದರ್ಭಗಳಲ್ಲಿ, ನಾನು ಸರ್ಕಾರವನ್ನು ಆಗ್ರಹ ಮಾಡುವುದು ಇಷ್ಟೆ. ತಾವು ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ, ಯಾರು ರಾಜಕೀಯವಾಗಿ ನನ್ನ ಮೇಲೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅವರನ್ನು ನಾನು ರಾಜಕೀಯವಾಗಿ ನೋಡಿಕೊಳ್ಳುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ನೇರವಾಗಿ ಅಂತಹ ಇಲಾಖೆಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು, ತಕ್ಷಣ ವ್ಯವಸ್ಥೆ ಮಾಡಬೇಕು. ಲೋಕಾಯುಕ್ತದವರು ಕನಿಷ್ಟ ಒಂದು ತಿಂಗಳ ಅವಧಿಯೊಳಗೆ ಅದನ್ನು ತನಿಖೆ ಮಾಡಬೇಕು. ಮಾಡುತ್ತೇವೆಂದು ಹೇಳಿ, ಹಾಗೆಯೇ ಉಳಿಯುವಂಥ ಪ್ರಯತ್ನಗಳು ಆಗಬಾರದು ಎಂಬುದು ನಮ್ಮ ಆಗ್ರಹ. ರಾಜಕೀಯ ವ್ಯವಸ್ಥೆ ಬಗ್ಗೆ ನಾನು ಖಂಡಿತವಾಗಿಯೂ ಈ ಸದನದಲ್ಲಿ ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಆ ರೀತಿ ಭ್ರಷ್ಟಾಚಾರ ಉಂಟು ಎಂದು ಹೇಳುವುದು ಸಾರ್ವಜನಿಕ ವಲಯದಲ್ಲಿ ಬಂದ ಮೇಲೆ, ಆ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವಂಥ ಸಂದರ್ಭಗಳಲ್ಲಿ ನನ್ನ ಆಗ್ರಹ ಇಷ್ಟೆ. ತಾಲ್ಲೂಕು ಕಛೇರಿ, ಪುರಸಭೆ ಮೇಲೆ ಲೋಕಾಯುಕ್ತರಿಂದ ತಕ್ಷಣ ತನಿಖೆ ನಡೆಸಿ.

ಛೇರ್ಮನ್:- ಈಗಾಗಲೇ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರಲ್ಲಾ. Political action should be repulsed by polictical attacks only. There is a point in his reply.

**Sri. D.V. Sadananda Gowda:-** I do concede. I don't dispute that.

**ಈ) ರಾಜ್ಯದಲ್ಲಿ ಗ್ರಾಮೀಣ ಕೃಪಾಂಕದ ಮೇಲೆ ನೇಮಕಾತಿಯಾದ ಪೈಕಿ ಗೃಹ ಇಲಾಖೆಯಲ್ಲಿ 13 ಮಂದಿಯನ್ನು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ.**

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 13,500 ಜನ ಗ್ರಾಮೀಣ ಕೃಪಾಂಕದಿಂದ ನೇಮಕಾತಿಯಾದರು. ಇದು ಕೋರ್ಟಿಗೆ ಹೋಗಿದ್ದು, ಈ 13,500 ಜನರನ್ನೂ ರಕ್ಷಣೆ ಮಾಡುತ್ತೇವೆಂದು ಸರ್ಕಾರ ಹೇಳಿದೆ. ಇದುವರೆಗೆ ಯಾರನ್ನೂ ತೆಗೆದಿಲ್ಲ. ಆದರೆ, ಇವರ ಇಲಾಖೆಯಲ್ಲಿ ಕೇವಲ 123 ಜನ ಆರಕ್ಷಕ ನಿರೀಕ್ಷಕರಲ್ಲಿ 13 ಜನರನ್ನು ಮಾತ್ರ ತೆಗೆದಿದ್ದಾರೆ. ಅವರನ್ನು ಏಕೆ ತೆಗೆದಿರಿ? ಏಕೆಂದರೆ, ಈಗಾಗಲೇ ಅವರನ್ನೆಲ್ಲಾ ಉಳಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ. 13,500 ಜನರಲ್ಲಿ 13 ಜನರನ್ನು ಮಾತ್ರ ತೆಗಿದಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಈ ವಿಚಾರದಲ್ಲಿ ಸುಪ್ರೀಂಕೋರ್ಟಿಗೆ ಮತ್ತೆ ಕೆಲವರು ಹೋಗಿದ್ದಾರೆ. ಈ 13,500 ಜನರನ್ನೂ ತೆಗೆಯಿರಿ ಎಂದು ಕಂಟೆಂಪ್ಟ್ ಆಫ್ ಕೋರ್ಟ್ ಹಾಕಿದ್ದಾರೆ. ಇದು ಸುಪ್ರೀಂಕೋರ್ಟ್ ಮುಂದೆ ಪೆಂಡಿಂಗ್ ಇದೆ. ಅವರು 13 ಜನರ ಬಗ್ಗೆ ಅವರು ಹೇಳುತ್ತಿದ್ದಾರೆ. 13,500 ಜನರ ಸರ್ವೀಸ್ ಸೆಕ್ಯುರಿಟಿ ಏನಿದೆ,

ಅದರ ಬಗ್ಗೆಯೂ ಪ್ರಶ್ನೆ ಬಂದಿದೆ. ಅದಕ್ಕೆ ಸರ್ಕಾರ, ಹಿಂದಕ್ಕೆ ಏನು ನೆಗ್ಲಿಜೆನ್ಸ್ ಆಗಿದೆ, ಕೇಸ್ ನಡೆಸುವಾಗ ನೆಗ್ಲಿಜಿಯನ್ಸ್ ಆಯಿತು. ಮತ್ತೆ ನಾಳೆ ಇದರ ಬಗ್ಗೆ ಸರಿಯಾಗಿ ಫೇಸ್ ಮಾಡಬೇಕು. ಹಿಂದೆ ಮಾನ್ಯ ಚಂದ್ರೇಗೌಡರು ಹೇಳಿದರು, ಆ 13,500 ಜನರಿಗೆ ಏನೂ ತೊಂದರೆಯಾಗುವುದಿಲ್ಲ. ಯಾರು ಕೋರ್ಟಿಗೆ ಹೋಗಿದ್ದಾರೆ, ಅವರದಷ್ಟೇ ನಾವು ಮಾಡುತ್ತೇವೆಂದು ಹೇಳಿದ್ದರು. ಈಗ ಮತ್ತೆ ಆ ಎಲ್ಲರ ಭವಿಷ್ಯ ಕರಾಳವಾಗುತ್ತಿದೆ. ಅದಕ್ಕೆ ಸುಪ್ರೀಂಕೋರ್ಟಿನಲ್ಲಿ ಏನು ಕಂಟೆಂಪ್ಟ್ ಹಾಕಿದ್ದಾರೆ, ಅದರ ಬಗ್ಗೆ ಸರಿಯಾಗಿ ಕೇಸ್ ನಡೆಸಿ ಸೆಕ್ಯುರಿಟಿ ಕೊಡುವಂಥಾದ್ದು ಆಗಬೇಕು. ಪ್ರತಿಪಕ್ಷದಲ್ಲಿದ್ದವರು ನಾವೆಲ್ಲರೂ ಹೇಳಿದ್ದೇವೆ. ನಿಮಗೆ ಎಲ್ಲಾ ರೀತಿಯ ಸಹಕಾರ ಕೊಡಲಿಕ್ಕೆ ತಯಾರಿದ್ದೇವೆ. ಸರ್ಕಾರದ್ದು ಏನಾದರೂ ತಪ್ಪಾಗಲಿ ಬಿಡಲಿ, ಇವತ್ತು ಆ 13,500 ಜನರ ಸರ್ವೀಸ್ ಸೆಕ್ಯುರಿಟಿ ಸಲುವಾಗಿ, ನೀವು ಯಾವುದೇ ಕಾನೂನು ಅಮೆಂಡ್ ಮಾಡಿ ಅಥವಾ ಏನೇ ಮಾಡಿ. ಅದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡಲಿಕ್ಕೆ ಈ ಕಡೆಯವರು ತಯಾರಿದ್ದೇವೆ. ಅದಕ್ಕೆ ಸುಪ್ರೀಂ ಕೋರ್ಟಿನಲ್ಲಿ ಏನು ಕಂಟೆಂಪ್ಟ್ ಕೇಸ್ ಹಾಕಿದ್ದಾರೆ, ಅದರ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಂಡು ಆ ಕೇಸನ್ನು ನಡೆಸುವಂಥಾದ್ದು ಆಗಬೇಕು. ಮತ್ತೆ ನೆಗ್ಲಿಜೆನ್ಸ್ ಆಗಬಾರದೆಂಬ ಒತ್ತಾಯ ಇದೆ ನಮ್ಮದು.

ಛೇರ್ಮನ್:- 13 ಜನರ ನೋವನ್ನು ಅವರು ರೆಪ್ರಸೆಂಟ್ ಮಾಡಿದ್ದಾರೆ. ನೀವು 13,500 ಜನರ ನೋವು ಹೇಳಿದ್ದೀರಿ. ಸರ್ಕಾರದ ಗಮನಕ್ಕೆ ಬರುತ್ತಾ ಇದೆ; They are going to reply.

ಶ್ರೀ ಎಸ್.ಎಸ್. ಪಾಟೀಲ್:- ನ್ಯಾಯಾಂಗ ಇಲಾಖೆಯಲ್ಲಿ ಕೆಲವರನ್ನು ತೆಗೆದಿದ್ದರು. ಮುಂದೆ ಅವರನ್ನು ಪಾರ್ಟಿ ಮಾಡಿಲ್ಲವೆಂಬ ದೃಷ್ಟಿಯಿಂದ ಹೊಳ್ಳಿ ತೆಗೆದುಕೊಂಡಿದ್ದಾರೆ. ಈಗಾಗಲೇ ನ್ಯಾಯಾಂಗ ಇಲಾಖೆಯವರು ಅವರಿಗೆ ಮತ್ತೆ ಆರ್ಡರ್ ಕೊಟ್ಟಿದ್ದಾರೆ. ಇವರು ತೆಗೆಯುವಾಗ 13,500 ಜನರೂ ಹೋದರೆ ಆ ಮಾತು ಬೇರೆ. ಆದರೆ, ತಾವು ದಯವಿಟ್ಟು ಹೋಗದಹಾಗೆ ನೋಡಿಕೊಳ್ಳಬೇಕು. ತಾವೂ ಕೂಡ ಹಳ್ಳಿಯಿಂದ ಬಂದವರು, ಹಳ್ಳಿ ಜನರ ಬಗ್ಗೆ ತಮಗೂ ಕಲ್ಪನೆ ಇದೆ. ಆ ಹಳ್ಳಿಯ ಜನರನ್ನು ಏನಾದರೂ ಮಾಡಿ ಉಳಿಸಿಕೊಂಡು ಹೋಗುವ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಈ 13 ಜನರನ್ನೇ ಏಕೆ ತೆಗೆದಿರಿ? ಅವರನ್ನು ತೆಗೆದ ಆದೇಶವನ್ನೂ ತಾವು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಈ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಹಳ್ಳಿಯ ಜನರ ಅಭ್ಯರ್ಥಿಗಳಿಗೆ ಮತ್ತು ಹಳ್ಳಿಯ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದಲೇ, ಆ ರೆಕ್ರೂಟ್‌ಮೆಂಟ್ ಮಾಡಿ, ಮಾರ್ಕ್ಸ್ ವೆಯ್ಟೇಜನ್ನು ಕೊಟ್ಟಿದ್ದರು. ಆದರೆ, ಕಾರಣಾಂತರದಿಂದ ಸುಪ್ರೀಂಕೋರ್ಟ್ ಅದನ್ನು ಹೊಡೆದುಹಾಕಿದ ಮೇಲೆ ಗತ್ಯಂತರ ಇಲ್ಲ. ನಾವು ಆರ್ಟಿಕಲ್ 371ಅನ್ನು ಅಮೆಂಡ್‌ಮೆಂಟ್ ಮಾಡಬೇಕೆಂದು ಈ ಹಿಂದಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅವರು ಕೆಲವು ಕ್ವೆರೀಸ್ ಕೂಡ ಹಾಕಿ ಕಳುಹಿಸಿದ್ದರು. ಅದಕ್ಕೆ ಉತ್ತರವನ್ನು ಕೊಟ್ಟು, ಕಾನೂನು ಇಲಾಖೆಯವರು ಏನು ಸಮಜಾಯಿಷಿ ಕೊಡಬೇಕಾಗಿತ್ತೋ ಅದನ್ನು ಕಳುಹಿಸಿದ್ದಾರೆ. ಬಹುಶಃ ಅದು ಅಪ್ರೂವ್ ಆಗಿ ಬಂದರೆ ಖಂಡಿತವಾಗಿ ಈ ರೂರಲ್ ವೆಯ್ಟೇಜ್‌ಗಾಗಲೀ, ರೀಜನಲ್ ಇಂಬ್ಯಾಲೆನ್ಸ್‌ನ್ನು ಹೋಗಲಾಡಿಸುವುದಕ್ಕಾಗಲೀ

ಅನುಕೂಲವಾಗುತ್ತದೆಂದು ನಮಗೆ ದೃಢ ವಿಶ್ವಾಸ ಇದೆ. ಆ ಪ್ರಯತ್ನವನ್ನು ನೀವು ಈಗಾಗಲೇ ನಡೆಸಿದ್ದೇವೆ. ಆದರೆ, ಇರತಕ್ಕಂಥ 13,500 ಜನರನ್ನು ಹೇಗೆ ಉಳಿಸಬೇಕೆಂಬುದಕ್ಕೆ ನಾವು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಖಂಡಿತವಾಗಿಯೂ ನಾವು ಇವರನ್ನು ಕೈಬಿಡಬೇಕೆಂಬುದು ಇಲ್ಲ. ಅವರ ರಕ್ಷಣೆಗೋಸ್ಕರವೇ ನಾವು ಪದೇ ಪದೇ ಪ್ರಯತ್ನ ಮಾಡುತ್ತಿದ್ದೇವೆ. ಯಾವ ದೃಷ್ಟಿಯಿಂದ ಆಗಬೇಕೆಂಬುದಕ್ಕೆ ಲಾ ಡಿಪಾರ್ಟ್‌ಮೆಂಟಿನವರೂ ಕೂಡ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ತಾವು ಹೇಳಿದಹಾಗೆ, ಈ ಕಂಟೆಂಪ್ಟ್ ಏನು ಹಾಕಿದ್ದಾರೆ ಆ ಕಂಟೆಂಪ್ಟ್ ಕೇಸಿಗೆ, ಸಮರ್ಥವಾದಂಥ ವಕೀಲರನ್ನು ಇಟ್ಟು, ಯಾವ ರೀತಿಯಾಗಿ ಆರ್ಗ್ಯುಮೆಂಟ್ ಮಾಡಬೇಕೋ ಅದನ್ನು ಮಾಡಲೇಬೇಕಾಗುತ್ತದೆ. ಆದರೆ, ಜಡ್ಜ್‌ಮೆಂಟ್ ಕೊಡತಕ್ಕಂಥಾದ್ದು ನಮ್ಮ ನಿಮ್ಮ ಕೈಯಲ್ಲಿ ಇಲ್ಲ. ಕೊನೆಗೆ ಸುಪ್ರೀಂ ಕೋರ್ಟಿನಿಂದ ಏನು ಆದೇಶ ಬರುತ್ತದೆ. ಅದನ್ನು ನಾವು, ನೀವು ಒಪ್ಪಿಕೊಳ್ಳಬೇಕು. ಆದರೆ, ಇದನ್ನು ಯಾವ ರೀತಿಯಾಗಿ ಇತ್ಯರ್ಥ ಮಾಡಬೇಕೆಂಬುದು ಬಹಳ ಮುಖ್ಯ. ಅದರ ಕಡೆ ಕರ್ನಾಟಕ ಸರ್ಕಾರದ ಗಮನ ಇದೆ. ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳುತ್ತೇನೆ. 13 ಜನ ಇನ್‌ಸ್ಪೆಕ್ಟರುಗಳನ್ನು ಏಕೆ ತೆಗೆದಿದ್ದೀರಿ ಎಂಬ ಪ್ರಶ್ನೆ. ಇವರು ಹಳ್ಳಿಯವರು ಇದ್ದಾರೆ ಎಂದು ವೆಯ್ಟೇಜ್ ಕೊಟ್ಟಮೇಲೆ ಬಂದಂಥವರು ಎಂದು ಹೇಳಿದಿರಿ. ಅದಕ್ಕೂ ನಾವು ಆದಷ್ಟು ಪ್ರಯತ್ನ ಮಾಡಿದ್ದೇವೆ. ಅದೂ ಕೂಡ ಕೋರ್ಟಿನಿಂದ ಬಂದಮೇಲೆ, ಮತ್ತೆ ಕೆ.ಎ.ಟಿ.ನಿಂದ ಅವರು ಸ್ಟೇ ತಂದಿದ್ದಾರೆ. ಅವರೂ ಮಧ್ಯದಲ್ಲೇ ಇದ್ದಾರೆ. ನಾವು ತೆಗೆಯಬೇಕೆಂದಿದ್ದರೆ, ಪ್ರಾರಂಭದಲ್ಲೇ ತೆಗೆಯುತ್ತಿದ್ದೆವು. ಆದರೆ, ಅನಿವಾರ್ಯವಾಗಿ ನಮಗೆ ಸುಪ್ರೀಂ ಕೋರ್ಟಿನಿಂದ ಬಂದಮೇಲೆ ಒಂದು ಕಂಟೆಂಪ್ಟ್. ಇದು ನಿಮಗೆ ಗೊತ್ತು, ಹಿಂದೆ ವಾಸುದೇವನ್ ಎಂಬ ಸೆಕ್ರಟರಿಯವರಿಗೇ ಒಂದು ತಿಂಗಳು ಒಳಗೆ ಹಾಕಿದ್ದರು. ಹಾಗೆ, ನಾಳೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ, ಕೋರ್ಟಿಗೂ ಮಾನ್ಯತೆ ಕೊಡಬೇಕು. ಅನೇಕಸಾರಿ, ಇಲ್ಲಿ ಕೋರ್ಟಿನ ನಿರ್ಣಯಗಳಿಗೆ ಏಕೆ ಮಾನ್ಯತೆ ಕೊಟ್ಟಿಲ್ಲವೆಂದೂ ಕೇಳುತ್ತೇವೆ. ಕೊಟ್ಟರೆ ಕೆಲವುಸಲ ಅನಾಹುತ ಕೂಡ ಆಗುತ್ತದೆ. ಈ ಪರಿಸ್ಥಿತಿ ಇದ್ದ ಕಾರಣ ಮತ್ತು ಕೆ.ಎ.ಟಿ.ಯಿಂದ ಸ್ಟೇ ತಂದಿದ್ದಾರೆಂದು ನಾವು ಹಾಗೇ ಇದ್ದೇವೆ. 13,500 ಜನಕ್ಕೆ ಏನು ಪರಿಹಾರ ಹುಡುಕುತ್ತಿದ್ದೇವೆ, ಆ ಪರಿಹಾರದಲ್ಲಿ ಅವರಿಗೂ ಕೂಡ ಅನುಕೂಲವಾಗಲಿ ಎಂಬುದೇ ನಮ್ಮ ಆಸೆ. ನಮ್ಮಲ್ಲಿ ವೇಕೆನ್ಸಿ ಕೂಡ ಇವೆ. ಸಧ್ಯಕ್ಕೆ ಕೈಹಚ್ಚಬಾರದು ಎಂದು ನಾವು ಹಾಗೆಯೇ ಕುಳಿತಿದ್ದೇವೆ. ಒಂದುವೇಳೆ ಎಲ್ಲರೂ ಚರ್ಚೆ ಮಾಡಿಕೊಳ್ಳುತ್ತಾ ಹೋದರೆ, ಯಾರಿಗೆ ತೊಂದರೆಯಾಗಿದೆಯೋ ಅವರು ಮತ್ತೆ ಕೋರ್ಟಿಗೆ ಹೋಗುತ್ತಾರೆ. ಅದಕ್ಕಾಗಿ, ದಯವಿಟ್ಟು ಇದನ್ನು ಇಲ್ಲಿಗೇ ಮುಗಿಸುವುದು ಒಳ್ಳೆಯದು.

**Mr. Chairman:-** The Government is also serious about the matter. Let us stop it.

ಊ) ಆಳಂದ ಕ್ಷೇತ್ರದ ಇನದಾಳ್ ಎಂಬ ಗ್ರಾಮದಲ್ಲಿ ಒಬ್ಬ ರೈತ ತನ್ನ ಬಾವಿಗೆ ಕರೆಂಟ್ ವೈರ್ ಜೋಡಣೆ ಮಾಡುವಾಗ ವಿದ್ಯುತ್ ತಗಲಿ ಸಾವನ್ನಪ್ಪಿದ್ದರಿಂದ ಪರಿಹಾರ ಕೋರಿಕೆ.

ಶ್ರೀ ಸುಭಾಷ್ ಗುತ್ತೇದಾರ್ (ಆಳಂದ):- ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಇನದಾಳ್ ಎಂಬ ಗ್ರಾಮದಲ್ಲಿ ದರೆಪ್ಪ ತಂದೆ ದುಂಡಪ್ಪ ಹೋಕಪುರ್ ಎಂಬ ಒಬ್ಬ ರೈತ ತನ್ನ